SRI VISHWANATH REDDY MUDNAL.—Speaker's ruling cannot be questioned.

ಶ್ರೀ ಎಸ್. ಬಂಗಾರಪ್ಪ.—ಆದರೆ ವೈಯುಕ್ತಿಕ ವಿಚಾರ ಬಂತು. ಅದನ್ನು ತಾವು ಕ್ಲೋಜ್ ಮಾಡಿದಿರಿ. ಆದರೆ ಪ್ರಶ್ನೆಯನ್ನು ಏನು ಮಾಡಿದಿರಿ.

ಅಧ್ಯಕ್ಷರು.—ಆ ಪ್ರಶ್ನೆಯನ್ನು ತಡೆ ಹಿಡಿದಿದ್ದೇನೆ. ವಿವರವಾದ ಉತ್ತರ ಕೊಡಲಿ. ಈಗ ಬೇರೆ ಪ್ರಶ್ನೆಗೆ ಹೋಗೋಣ.

ಶ್ರೀ ಎಸ್. ಬಂಗಾರಪ್ಪ.—ಯಾವಾಗ ತೆಗೆದುಕೊಳ್ಳುತ್ತೀರಿ ?

ಅಧ್ಯಕ್ಷರು.—ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಯಾವಾಗ ಬರುತ್ತದೆಂದು ಹೇಳಿ.

ಅಧ್ಯಕ್ಷರು.—ನೆಕ್ಸ್ಟ ವೀಕ್ ಬರಬಹುದು.

ಶ್ರೀ ಎಸ್. ಬಂಗಾರಪ್ಪ.—ಬರಬಹುದು ಅಂದರೆ ಹೇಗೆ ? ಯಾವಾಗ ಉತ್ತರ ಕೊಡಿಸುತ್ತೀರೆಂದು ಖಚಿತವಾಗಿ ಹೇಳಿ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳೇ, ಯಾವಾಗ ಸಂಪೂರ್ಣವಾದ ಉತ್ತರ ತರಿಸಿಕೊಡುತ್ತೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ನಿಮಗೆ ಸಂಪೂರ್ಣ ಮಾಹಿತಿ ಇರುವ ಕಾಪಿ ತರಿಸಿ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಬುಧವಾರ ಇಟ್ಟು ಕೊಳ್ಳೋಣ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಆಗಬಹುದು.

ಶ್ರೀ ಆರ್. ವೆಂಕಟರಾಮಯ್ಯ.—ಭಾಗ್ಯಜ್ಯೋತಿ ಯೋಜನೆಯಲ್ಲಿ ಕರೆಂಟ್ ಡಿಸ್‌ಕನೆಕ್ಟ್ ಮಾಡಿದ್ದಾರೆ, ಅವರಿಗೆ ಕನೆಕ್ಷನ್ ಕೊಡಿ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಮಾನ್ಯ ಕೆ. ಎಚ್. ಪಾಟೀಲ್‌ರವರೇ ತಾವು ಪ್ರಶ್ನೆ ಕೇಳಿ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಂತ್ರಣವು ಅನುಭವಿಸಿದ ಲಾಭ ಮತ್ತು ನಷ್ಟ ಕುರಿತು

೧೫೨ (೪೦೪) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ದೊಡ್ಡ ಮತ್ತು ಮಧ್ಯಮ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ:—

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವು ಅನುಭವಿಸಿದ ಲಾಭ ಮತ್ತು ನಷ್ಟವೆಷ್ಟು. ಎಲ್ಲ ಅನುಭವಿ ಅಧಿಕಾರಿಗಳನ್ನು ಈ ಕಾರ್ಖಾನೆಯಿಂದ ಹೊರಹಾಕಲಾಗಿದೆ ಎಂಬುದು ನಿಜವೇ, ಆದುದರಿಂದಾಗಿ ಕಾರ್ಖಾನೆಗೆ ಅತೀವ ನಷ್ಟ ಸಂಭವಿಸಿದೆ ಎಂಬುದು ನಿಜವೆ ?

ಶ್ರೀ ಸಿ. ವೀರಣ್ಣ (ಕೈಗಾರಿಕೆ ಮತ್ತು ಸಣ್ಣ ಉಳಿತಾಯ ಸಚಿವರು).—

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವು ಕಳೆದ ಮೂರು ವರ್ಷಗಳಲ್ಲಿ ಅನುಭವಿಸಿದ ನಷ್ಟದ ವಿವರ ಈ ಕೆಳಗಿನಂತಿದೆ.

		೧೯೮೪-೮೭	೧೯೮೭-೮೮ (ಲಕ್ಷ ರೂ. ಗಳಲ್ಲಿ)	೧೯೮೮-೮೯ (೨೮-೨-೮೯ರ ವರೆಗೆ)
೧.	ನಿವ್ವಳ ನಷ್ಟ	೬೨೫.೭೬	೭೩೩.೦೪ (ತಾತ್ಕಾಲಿಕ)	೧೨೩೭.೩೬ (ತಾತ್ಕಾಲಿಕ)
೨.	ಸಂಚಿತ ನಷ್ಟ	೨೬೮೪.೮೭	೩೬೧೦.೮೦ (ತಾತ್ಕಾಲಿಕ)	೪೮೪೮.೧೬ (ತಾತ್ಕಾಲಿಕ)

ಯಾವುದೇ ಅನುಭವಸ್ಥ ಅಧಿಕಾರಿಗಳನ್ನು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದಿಂದ ತೆಗೆದು ಹಾಕಿರುವುದಿಲ್ಲ. ಆದುದರಿಂದ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತಕ್ಕೆ ನಷ್ಟವಾಗಿದೆ ಎಂಬುದು ಉದ್ಭವಿಸುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಯಾರನ್ನೂ ಕೆಲಸದಿಂದ ತೆಗೆದುಹಾಕಿಲ್ಲವೆಂದು ಅಧಿಕಾರಿಗಳು ಬರೆದು ಕೊಟ್ಟ ತಪ್ಪು ವರದಿಯನ್ನು ಮಾನ್ಯ ಸಚಿವರು ಓದಿದ್ದಾರೆ. ಆದರೆ ನಾನು ಅವರುಗಳ ಹೆಸರುಗಳನ್ನು ಹೇಳಬಲ್ಲೆ.

ಶ್ರೀ ಸಿ. ವೀರಣ್ಣ.—ಅನುಭವಸ್ಥರಾದಂಥ ಅಧಿಕಾರಿಗಳನ್ನು ತೆಗೆದುಹಾಕಿಲ್ಲವೆಂದು ಹೇಳಿದ್ದೀನೆ.

ಶ್ರೀ ಕೆ. ಹೆಚ್. ಪಾಟೀಲ್.—ನೀವು ತಾತ್ಕಾಲಿಕವಾಗಿರುವ ನಷ್ಟದ ಅಂದಾಜನ್ನು ಕೊಟ್ಟಿದ್ದೀರಿ. ೧೯೮೭-೮೮ರಲ್ಲಿ ಆಗಿರುವ ನಿವ್ವಳ ನಷ್ಟ ೬೨೫.೭೬ ಲಕ್ಷ ಇದ್ದದ್ದು ೧೯೮೮-೮೯ರಲ್ಲಿ ಡಬಲ್ ಆಗಿದೆ. ಈ ನಿಗಮಕ್ಕೆ ಐ. ಎ. ಎಸ್. ಆಫೀಸರ್‌ನ್ನು ಅಧಿಕಾರಿಯಾಗಿ ಮಾಡಿ ಇಷ್ಟು ನಷ್ಟವಾಗಿದೆ. ಟೆಕ್ನಿಕಲ್ ಆಫೀಸರ್‌ಗಳನ್ನು ಸಸ್ಪೆಂಡ್ ಮಾಡಿದ್ದೀರಿ. ಒಬ್ಬ ಚಾರ್ಟರ್ಡ್ ಅಕೌಂಟೆಂಟ್‌ನ್ನು ಶಿವಮೊಗ್ಗದಲ್ಲಿರುವ ಫ್ಯಾಕ್ಟರಿಗೆ ಹಾಕಿದ್ದೀರಿ. ಆದರೆ ಶಿವಮೊಗ್ಗದಲ್ಲಿರುವ ಫ್ಯಾಕ್ಟರಿಯಲ್ಲಿರುವವರಿಗೆ ಕೆಲಸವೇ ಇಲ್ಲ. ಅವರಿಗೆ ಪಗಾರ ೫ ಸಾವಿರ ರೂಪಾಯಿಗಳು ಇವೆ. ಅವನಿಗೆ ಏನೂ ಕೆಲಸ ಇಲ್ಲ. ಅವರ ಹೆಸರು ರಮೇಶ್ ಕೊಂಡಿ ಕೋಪ್ಪ ಎಂದು.

ಶ್ರೀ ಸಿ. ವೀರಣ್ಣ.—ತಾವು ಹೇಳಿದ್ದು ೫ ಜನರನ್ನಾ ?

ಶ್ರೀ ಕೆ. ಹೆಚ್. ಪಾಟೀಲ್.—ಚಾರ್ಟರ್ಡ್ ಅಕೌಂಟೆಂಟ್‌ಗೆ ೫ ಸಾವಿರ ರೂಪಾಯಿ ಸಂಬಳ ಕೊಡುತ್ತೀರಿ. ಇವರಿಗೆ ೭-೮ ವರ್ಷ ಸರ್ವೀಸ್ ಆಗಿದೆ. ಇವರನ್ನು ಒಬ್ಬ ಸಿಪಾಯಿ ಮಾಡುವ ಕೆಲಸಕ್ಕೆ ಹಚ್ಚಿದ್ದೀರಿ. ಆ ಫ್ಯಾಕ್ಟರಿಯಲ್ಲಿ ಕೆಲಸವೇ ಇಲ್ಲ. ಅಂಥಾ ಕಡೆ ಈ ಆಫೀಸರ್‌ನ್ನು ಇಟ್ಟಿದ್ದೀರಿ. ಈ ನಿಗಮಕ್ಕೆ ೧೨೩೭.೩೬ ಲಕ್ಷ ರೂಪಾಯಿಗಳನ್ನು ನಷ್ಟ ಮಾಡಿರುವ ಅಧಿಕಾರಿಯನ್ನು ಸಸ್ಪೆಂಡ್ ಮಾಡದೆ ಏಕಿದ್ದೀರಿ ?

ಶ್ರೀ ಸಿ. ವೀರಣ್ಣ.—ಮಾನ್ಯ ಪಾಟೀಲರು ಹೇಳಿರುವಂತೆ ೫ ಜನ ಆಫೀಸರ್‌ಗಳನ್ನು ಸಸ್ಪೆಂಡ್ ಮಾಡಿದ್ದೇವೆ. Sri V. Jayappa, Former Managing Director, suspended on 27-6-88, Sri V. M. Pai, Technical Director, suspended on 27-7-87, Sri Lokesh Gowda, the then Senior Production Manager, suspended on 25-7-87 Sri M. K. Ramesh, Senior Manager (Costing) suspended on 29-7-87 and Sri B. T. Janardhan, Commercial Manager, suspended on 6-8-87. Sri Lokesh Gowda, Sri M. K. Ramesh and Sri B. T. Janardhan were reinstated on 21-11-88, 21-10-88 and 21-10-88 respectively.

ಶ್ರೀ ಕೆ. ಹೆಚ್. ಪಾಟೀಲ್.—ಕೆಲವು ಆಫೀಸರ್‌ಗಳನ್ನು ಜೆ. ಹೆಚ್. ಪಟೀಲರ ಕಾಲದಲ್ಲಿ ಸಸ್ಪೆಂಡ್ ಮಾಡಲಾಗಿತ್ತು. ಅವರುಗಳನ್ನು ಮತ್ತೆ ರೀ ಇನ್‌ಸ್ಟೇಟ್ ಮಾಡಲಾಗಿದೆ. ಅವರನ್ನು ತೆಗೆದುಕೊಳ್ಳಬೇಡಿ. ಎಂದು ಮತ್ತೆ ಮತ್ತೆ ಇನ್‌ಸ್ಟ್ರಕ್ಷನ್ ಕೊಟ್ಟರೂ ತಿರುಗಿ ಅವರನ್ನು ಕೆಲಸಕ್ಕೆ ತೆಗೆದುಕೊಂಡು ಮತ್ತೆ ಶಿವಮೊಗ್ಗಕ್ಕೆ ವರ್ಗಾ ಮಾಡಿದ್ದಾರೆ. Is it the way the officers

should do things like this ? Have they any respect for the Government ? What can we do if you give such reports ? ೧೫೩೭ ಲಕ್ಷ ಲಾಸ್ ಆಗಿದೆ. ಇದರ ಬಗ್ಗೆ ಹೇಳಿದರೆ ತಪ್ಪಾಗಿ ಸಿಟ್ಟು ಬರುತ್ತದೆ. ಇದಕ್ಕೆ ಏನು ಹೇಳಬೇಕು. ನೀವೇ ಹೇಳಿ.

ಶ್ರೀ ಸಿ. ವೀರಣ್ಣ.—ಅವರನ್ನು ಟ್ರಾನ್ಸ್‌ಫರ್ ಮಾಡಿದ ಕಾರಣಕ್ಕೆ ಮತ್ತು ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ ಕಾರಣಕ್ಕೆ ಫ್ಯಾಕ್ಟರಿ ನಷ್ಟ ಅನುಭವಿಸಿಲ್ಲವೆಂದು ನಾನು ಹೇಳುತ್ತೇನೆ.

ಆನೇಕಲ್ ತಾಲ್ಲೂಕಿಗೆ ವಿದ್ಯುತ್ ಸರಬರಾಜು

೧೫೩೩ (೬೬೭) ಶ್ರೀ ಎಂ. ಪಿ. ಕೇಶವಮೂರ್ತಿ (ಆನೇಕಲ್).—ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಆನೇಕಲ್ ತಾಲ್ಲೂಕಿನಲ್ಲಿ ೧೯೮೮-೮೯ ಹಾಗೂ ಈ ತಹಲ್‌ವರೆಗೆ ಎಷ್ಟು ಪಂಪು ಸೆಟ್ಟುಗಳಿಗೆ ವಿದ್ಯುತ್ ಸರಬರಾಜಿಗಾಗಿ ರೈತರಿಂದ ಅರ್ಜಿಗಳು ಬಂದಿವೆ ?

ಆ) ಈ ಅರ್ಜಿಗಳ ಪೈಕಿ ಎಷ್ಟು ಪ್ರಕರಣಗಳಲ್ಲಿ ವಿದ್ಯುತ್ ಒದಗಿಸಲಾಗಿದೆ ಮತ್ತು ಎಷ್ಟು ಪ್ರಕರಣಗಳಲ್ಲಿ ಇನ್ನೂ ವಿದ್ಯುತ್ ಒದಗಿಸಬೇಕಾಗಿದೆ?

ಇ) ಉಳಿದವುಗಳಿಗೆ ಎಂದು ವಿದ್ಯುತ್ ಒದಗಿಸಲಾಗುವುದು?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

ಅ) ೧-೪-೧೯೮೮ ರಿಂದ ೨೦-೩-೧೯೮೯ರವರೆಗೆ ೫೭೮ ಅರ್ಜಿಗಳು ಮಂಡಳಿಯಲ್ಲಿ ನೋಂದಾಯಿಸಲ್ಪಟ್ಟಿವೆ.

ಆ) ಅರ್ಜಿಗಳ ಪೈಕಿ ೨೩೪ ಅರ್ಜಿದಾರರಿಗೆ ವಿದ್ಯುತ್ ಒದಗಿಸಲಾಗಿದೆ. ೨೦-೩-೧೯೮೯ರಲ್ಲಿ ಬಾಕಿ ಉಳಿದ ಅರ್ಜಿಗಳ ಸಂಖ್ಯೆ. ೩೪೪

ಇ) ಇವುಗಳಿಗೆ ಮುಂದಿನ ಸಾಲಿನಲ್ಲಿ ವಿದ್ಯುತ್ ಒದಗಿಸಲು ಪ್ರಯತ್ನಿಸಲಾಗುತ್ತದೆ.

ಶ್ರೀ ಎಂ. ಪಿ. ಕೇಶವಮೂರ್ತಿ.—ಸನ್ಮಾನ್ಯ ಸಭಾಧ್ಯಕ್ಷರೇ, ೧೯೮೮-೮೯ನೇ ವರ್ಷದಗುರಿಯು ಎಷ್ಟಿದೆ ? ಅದರಲ್ಲಿ ಸಾಧನೆ ಎಷ್ಟು ಮಾಡಿದ್ದಾರೆ ? ಈಗಾಗಲೇ ರೈತರು ಸಾವಿರಾರು ರೂಪಾಯಿಗಳ ಸಾಲಪತ್ರವನ್ನು ಮಾಡಿ ಕೊಳವೆಬಾವಿಗಳನ್ನು ತೋಡಿಸಿ, ವಿದ್ಯುತ್ ಇಲ್ಲದೆ ಬಹಳ ತೊಂದರೆಗೆ ಒಳಗಾಗಿದ್ದಾರೆ. ನಮ್ಮ ಆನೇಕಲ್ ತಾಲ್ಲೂಕು ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ ಅದ್ಯತೆಯ ಮೇರೆಗೆ ಅದಷ್ಟು ಜಾಗ್ರತೆ ಉಳಿದಿರತಕ್ಕಂಥ ಕೊಳವೆಬಾವಿಗಳಿಗೆ ವಿದ್ಯುತ್‌ಚ್ಛಕ್ತಿಯನ್ನು ಕೊಡಿಸಬೇಕೆಂದು ತಮ್ಮ ಮೂಲಕ ಸರಕಾರವನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—೧೯೮೩ರಲ್ಲಿ ನಮ್ಮ ಸರಕಾರ ಅಧಿಕಾರಕ್ಕೆ ಬಂದಾಗ ಸುಮಾರು ೪೦ ಸಾವಿರ ಪಂಪ್‌ಸೆಟ್‌ಗಳಿಗೆ ಪ್ರತೀ ವರ್ಷವೂ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ ಎಂದು ಘೋಷಣೆ ಮಾಡಿ ಪ್ರತಿವರ್ಷವೂ ಕೂಡ ಟಾರ್ಗೆಟ್ ಮೀರಿ ಕೆಲಸ ಮಾಡಿದ್ದೇವೆ. ೪೧ ಸಾವಿರ ಪಂಪ್‌ಸೆಟ್‌ಗಳಿಗೆ ೧೯೮೭-೮೮ರಲ್ಲಿ ಸರ್ವಿಸನ್ ಕೊಟ್ಟಿದ್ದೇವೆ. ನಾವು ಏನು ಗುರಿಯನ್ನು ಇಟ್ಟುಕೊಂಡಿದ್ದೆವೋ ಅದಕ್ಕಿಂತ ಕಡಿಮೆ ಕೆಲಸವನ್ನು ನಾವ್ ಮಾಡಿಲ್ಲ. ಈಗ ಉಳಿದಿರತಕ್ಕಂಥ ೧೧೦ ಪಂಪ್‌ಸೆಟ್‌ಗಳ ಕೆಲಸ ವಿವಿಧ ಹಂತದಲ್ಲಿದೆ. ಹಿಳಿಳಿ ಅರ್ಜಿಗಳು ಬಾಕಿ ಇದ್ದರೂ ೧೯೬೬ ಪಂಪ್‌ಸೆಟ್‌ಗಳ ಕೆಲಸ ಸಂಪೂರ್ಣವಾಗಿ ಮುಗಿದಿದ್ದು ಅವುಗಳಿಗೆ ಸರ್ವಿಸ್ ಕೊಡಬೇಕಾಗಿದೆ. ನಮ್ಮ ಗುರಿ ಮೀರಿ ೧೦ ಪರ್‌ಸೆಂಟ್‌ನಷ್ಟು ಆದರೂ ಕೆಲಸ ಮಾಡುತ್ತೇವೆ ಎಂದು ಮಾನ್ಯ ಸದಸ್ಯರಿಗೆ ಆಶ್ವಾಸನೆಯನ್ನು ಕೊಡಬಯಸುತ್ತೇನೆ.

ವರಾಹಿ ಜಲವಿದ್ಯುತ್ ಯೋಜನೆಯಂ ಸಣ್ಣ ಅಣೆಕಟ್ಟು

೧೫೪೪(೬೪೧) ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—